**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No. 416/2023**

**PW-2 CW-4**

| | | |
|---|---|---|
| ಸಾಕ್ಷಿದಾರನ ಹೆಸರು | : | ನಿಜಗುಣ ತಂದೆ ಶರಣಪ್ಪ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಗಬ್ಬೂರು |
| ಪ್ರಮಾಣಿಕರಿಸಿದ ದಿನಾಂಕ | : | 05-04-2025 |

---

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಚಾಸಾ-1 ನನಗೆ ತಂದೆಯಾಗಬೇಕು. ಚಾಸಾ-2, 3, 5 ರಿಂದ 7 ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುತ್ತದೆ.

ದಿನಾಂಕ 26-02-2021 ರಂದು ಸಂಜೆ 7-30 ಗಂಟೆಯ ಸಮಯದಲ್ಲಿ ಚಾಸಾ-1 ಮತ್ತು ಚಾಸಾ-6 ರವರು ದ್ವಿಚಕ್ರ ವಾಹನದ ಮೇಲೆ ಹೋಗುತ್ತಿದ್ದಾಗ ಆರೋಪಿತರು ಚಾಸಾ-1 ರವರಿಗೆ ಕಟ್ಟಿಗೆಯಿಂದ ಹೊಡೆದಿರುತ್ತಾರೆ. ಕಟ್ಟಿಗೆಯಿಂದ ಚಾಸಾ-1 ರವರ ಬಲಗಾಲಿಗೆ ಹೊಡೆದು ಗಾಯಪಡಿಸಿರುತ್ತಾರೆ, ಆಗ ನಾನು ಜಗಳವನ್ನು ಬಿಡಿಸಿರುತ್ತೇನೆ. ನಂತರ ನನ್ನ ಅಣ್ಣಂದಿರಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದು ಸ್ಥಳಕ್ಕೆ ಬರುವಷ್ಟರಲ್ಲಿ ಆರೋಪಿತರು ಹೋಗಿದ್ದರು ನಂತರ ನಾವು ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇವೆ. ಆ ಕುರಿತು ಠಾಣೆಗೆ ದೂರನ್ನು ನೀಡಿರುತ್ತೇವೆ. ಆ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಒಂದು ಕಟ್ಟಿಗೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ MO-1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಗೈರು ಹಾಜರಿರುವುದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.